ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ ಮತ್ತು ನ್ಯಾಕ್ ನಿಂದ **'ಬಿ'** ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ – 571 440, ಚಾಮರಾಜನಗರ ಜಿಲ್ಲೆ**

☎: 08224-252149 🖷: 08224-256051 Email: jsscwk@gmail.com www.jsscwkgl.org

**ಪ್ರಕಟಣೆ ಕೃಪೆಗಾಗಿ**

**ಶಾಸನಗಳು ದೇಶದ ಆಸ್ತಿ**

## ವಿಶೇಷ ಉಪನ್ಯಾಸ ನೀಡಿ – ಡಾ. ಕಾಳಸ್ವಾಮಿ

ಕೊಳ್ಳೇಗಾಲ: 13.2.19 ಶಾಸನಗಳು ಮತ್ತು ವಾಸ್ತು ಶಿಲ್ಪಗಳು ನಮ್ಮ ದೇಶದ ಆಸ್ತಿ, ಅವುಗಳ ಬಗ್ಗೆ ಅರಿವು ಇರುವುದು ಕಡಿಮೆಯಾಗಿದೆ ಎಂದು ಡಾ.ಕಾಳಸ್ವಾಮಿ, ರಾಜ್ಯಶಾಸ್ತ್ರ ಪ್ರಾಧ್ಯಾಪಕರು, ಮಾನಸಗಂಗೋತ್ರಿ, ಮೈಸೂರು ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ **"ಇತಿಹಾಸ ವೇದಿಕೆ"** ವತಿಯಿಂದ **"ಶಾಸನ ಮತ್ತು ವಾಸ್ತು ಶಿಲ್ಪಗಳ ಮಹತ್ವ"** ಎಂಬ ವಿಷಯದ ಮೇಲೆ ಆಯೋಜಿಸಿದ್ದ ವಿಶೇಷ ಉಪನ್ಯಾಸ ನೀಡಿ ತಿಳಿಸಿದರು.

ಶಾಸನಗಳು ಮತ್ತು ವಾಸ್ತುಶಿಲ್ಪಗಳನ್ನು ಸಂರಕ್ಷಿಸಿ ಗೌರವಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಇವುಗಳ ಮೌಲ್ಯವನ್ನು ತಿಳಿಯದ ನಾಗರೀಕರೇ ಹೆಚ್ಚಿದ್ದಾರೆ. ಇವುಗಳ ಸಂರಕ್ಷಣೆ ಮತ್ತು ಅರ್ಥೈಸುವಿಕೆಯ ಬಗ್ಗೆ ಕಾರ್ಯಕ್ರಮಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆಯಬೇಕು. ಇಂತಹ ವಿಶೇಷ ಉಪನ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸಿ ವಿದ್ಯಾರ್ಥಿಗಳಿಗೆ ಈ ಬಗ್ಗೆ ಅರಿವು ನೀಡಬೇಕು. ಈ ದಿಶೆಯಲ್ಲಿ ಇಲ್ಲಿನ ಜೆಎಸ್‌ಎಸ್ ಕಾಲೇಜಿನ ಇತಿಹಾಸ ವಿಭಾಗದವರು ಉತ್ತಮ ಕಾರ್ಯಕ್ರಮ ನಡೆಸಿರುವುದು ಶ್ಲಾಘನೀಯ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಪ್ರೊ.ಉಮೇಶ ಶಾಸನವಾಗಲಿ, ವಾಸ್ತುಶಿಲ್ಪವಾಗಲಿ, ಹಸ್ತ ಪ್ರತಿಗಳೇ ಆಗಲಿ ತುಂಬಾ ಮಹತ್ವವುಳ್ಳವುಗಳಾಗಿವೆ. ಎಷ್ಟೋ ಜನ ತಮ್ಮ ಪೂರ್ವಿಕರು ಬರೆದ ಹಸ್ತ ಪ್ರತಿಗಳ ಮಹತ್ವ ಅರಿಯದೇ ಅವುಗಳನ್ನು ಹಾಳು ಮಾಡಿರುವುದನ್ನು ನಾವು ತಿಳಿದಿದ್ದೇವೆ. ಒಂದೊಂದು ಪ್ರತಿಯಲ್ಲೂ ಸೂಕ್ಷ್ಮ ಬುದ್ಧಿ, ಅರ್ಥ ಇದೆ. ಅವುಗಳನ್ನು ಅರಿತು ಸಂರಕ್ಷಿಸಿ ನಮ್ಮ ಮುಂದಿನ ತಲೆಮಾರಿನವರಿಗೂ ಇವುಗಳ ಮೌಲ್ಯವನ್ನು ತಿಳಿಸುವಂತೆ ಕಾರ್ಯ ನೆರವೇರಬೇಕು ಎಂದು ತಿಳಿಸಿದರು.

ಇತಿಹಾಸ ವಿಭಾಗದ ಮುಖ್ಯಸ್ಥರಾದ ಪ್ರೊ. ಹೆಚ್.ಜಿ ನಟರಾಜನ್‌ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.[

“ಇತಿಹಾಸ ವೇದಿಕೆ” ವತಿಯಿಂದ “ಶಾಸನ ಮತ್ತು ವಾಸ್ತು ಶಿಲ್ಪಗಳ ಮಹತ್ವ” ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ಕಾರ್ಯಕ್ರಮ.
ಚಿತ್ರದಲ್ಲಿ ಡಾ.ಕಾಳಸ್ವಾಮಿ, ಪ್ರಾಚಾರ್ಯ ಪ್ರೊ.ಉಮೇಶ ಮತ್ತು ಪ್ರೊ.ಹೆಚ್.ಜಿ ನಟರಾಜನ್‌ರವರನ್ನು ಕಾಣಬಹುದು.




ಡಾ.ಕಾಳಸ್ವಾಮಿರವರು ಉಪನ್ಯಾಸ ನೀಡುತ್ತಿರುವುದು. ಚಿತ್ರದಲ್ಲಿ ಪ್ರಾಚಾರ್ಯ ಪ್ರೊ.ಉಮೇಶ ಮತ್ತು

ಪ್ರೊ.ಹೆಚ್.ಜಿ ನಟರಾಜನ್‌ರವರನ್ನು ಕಾಣಬಹುದು.




ಉಪನ್ಯಾಸ ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರು ಭಾಗವಹಿಸಿರುವುದು.

